ಶಾಶ್ವತವಾಗಿರತಕ್ಕಂಥ ಪರಿಹಾರಗಳು ಏನಿವೆ ಆ ಕೆಲಸಗಳನ್ನು ತ್ವರಿತಗತಿಯಲ್ಲಿ ಮುಗಿಸಲಿಕ್ಕೆ ಮತ್ತು ಪ್ರಾರಂಭವಾಗದೇ ಇರತಕ್ಕಂಥ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಭರವಸೆಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರುಗಳಿಗೆ ನಾನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಅವರ ಭರವಸೆಯ ಬಗ್ಗೆ ನನಗೆ ಅಪನಂಬಿಕೆ ಇಲ್ಲ, ಆದರೆ ಇಂಥ ಭರವಸೆಯನ್ನು ಸುಮಾರು 6 ವರ್ಷಗಳಿಂದ ಪಡೆದು ಪಡೆದು ನನಗೆ ಬಹಳ ನೋವಾಗಿದೆ. ಈ ನೋವಿನ ಪರಿಸ್ಥಿತಿ ಮಾನ್ಯ ಸಿದ್ದರಾಮಯ್ಯನವರಿಗೂ ಅರ್ಥವಾಗಿದೆ. ಏಕೆಂದರೆ ಈ ವಿಚಾರದ ನೋವು ಅವರಿಗೂ ಬರುತ್ತದೆ ಆದ್ದರಿಂದ ನಮ್ಮ ಪರಿಸ್ಥಿತಿ ಬಗ್ಗೆ ತಮಗೂ ಅರ್ಥವಾಗುತ್ತದೆ. ನಾವು ನಮ್ಮ ಕ್ಷೇತ್ರದಲ್ಲಿ ಜನಗಳು ಈ ಬಗ್ಗೆ ಮಾತನಾಡಿಕೊಳ್ಳುವುದನ್ನು ಕೇಳತಕ್ಕಂಥ ಪರಿಸ್ಥಿತಿಯಲ್ಲಿ ನನಗನ್ನಿಸುತ್ತದೆ, ಬೇರೆ ವಿಧಿಯಿಲ್ಲದೇ ನಾನು ಧರಣಿಯನ್ನು ಮಾಡಬೇಕಾಗಿದೆ, ದಯಮಾಡಿ ತಾವು ಬೇಜಾರು ಮಾಡಿಕೊಳ್ಳಬಾರದು.

ವಾಟಾಳ್ ನಾಗರಾಜ್‌ರವರು ಈ ಪರಿಸ್ಥಿತಿಗೆ ಏತಕ್ಕೆ ಬಂದರು ಎಂದು ತಾವು ಬೇಸರ ಮಾಡಿಕೊಳ್ಳಬೇಡಿ. ಮಾನ್ಯ ಸಿಂಧ್ಯರವರು ಕೊಟ್ಟಂಥ ಉತ್ತರದ ಬಗ್ಗೆ ನನಗೆ ನಂಬಿಕೆ ಇಲ್ಲವೆಂದು ಅಲ್ಲ, ನಮ್ಮ ಮಾನ್ಯ ಹಣಕಾಸಿನ ಸಚಿವರಿಗೆ ಈ ಮಾತಿನ ಬಗ್ಗೆ ಗಮನ ಇಲ್ಲವೆಂದು ಅಲ್ಲ, ಕಳೆದ 6 ವರ್ಷಗಳಿಂದ ಇದೇ ಪರಿಸ್ಥಿತಿ ಆಗಿದೆ ಎಂದರೆ ನಾನೇನು ಮಾಡಬೇಕೋ ತಾವೇ ಹೇಳಿ ವಿಧಿ ಇಲ್ಲದೆ ನಾನು ತಮ್ಮ ಪೀಠದ ಮುಂದಿನ ಆವರಣದಲ್ಲಿ ಬಂದು ಧರಣಿ ಕುಳಿತುಕೊಳ್ಳಬೇಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಇವರು 6 ವರ್ಷಗಳ ಕಾಲ ಬೇರೆಯವರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಈಗ 6 ತಿಂಗಳ ಕಾಲ ಅವಕಾಶ ಕೊಡುವುದಕ್ಕೆ ತಯಾರಿಲ್ಲ, ಅಂದರೆ ಇವರು ಎಷ್ಟೊಂದು ನಿರ್ದಯಿಗಳಾಗಿದ್ದಾರೆಂಬುದನ್ನು ತಾವೇ ನೋಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಧರಣಿ ಕೂಡದೆ ಬೇರೆ ಮಾರ್ಗವೇ ಇಲ್ಲ, ಇದ್ದರೆ ತಾವು ಬೇರೆ ಮಾರ್ಗೋಪಾಯವನ್ನು ಹುಡುಕಿ.

(ಗೊಂದಲ)

(ಶ್ರೀ ವಾಟಾಳ್ ನಾಗರಾಜ್‌ರವರು ಮಾನ್ಯ ಅಧ್ಯಕ್ಷರ ಪೀಠದ ಮುಂದಿನ ಆವರಣದಲ್ಲಿ ಧರಣಿ ಕುಳಿತರು)

ಅಧ್ಯಕ್ಷರು : ಪ್ರಾರಂಭಕ್ಕೆ ತಾವು ಚಾಮರಾಜನಗರದ ಶಾಸಕರು. ದಿನ ಕಳೆದಂತೆ ತಾವು ಹಿರಿಯ ಸದಸ್ಯರಾಗುತ್ತಿದ್ದೀರಿ. ಅಂದ ಮೇಲೆ ರಾಜ್ಯದ ಪ್ರಮುಖ ನಾಯಕರುಗಳಲ್ಲಿ ಒಬ್ಬರು. ನೀವು ಚಾಮರಾಜ ನಗರದ ಕುಡಿಯುವ ನೀರಿಗೋಸ್ಕರ ಧರಣಿ ಮಾಡುವುದಾದರೆ ರಾಜ್ಯದ ಜನತೆ ಎಷ್ಟು ಬೇಸರ ಪಟ್ಟುಕೊಳ್ಳುತ್ತಾರೆ ತಾವೇ ಯೋಚನೆ ಮಾಡಿ.

(ಗೊಂದಲ)

ಅಧ್ಯಕ್ಷರು : ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ರಾಜ್ಯದ ಜನರಿಗೆ ನಿರಾಸೆ ಮಾಡಬಾರದು. ರಾಜ್ಯದ ಎಲ್ಲಾ ವಿಚಾರಗಳ ಬಗ್ಗೆ ತಾವು ಭಾಗವಹಿಸಬೇಕಾಗಿರುವುದರಿಂದ ದಯಮಾಡಿ ನನ್ನ ಮನವಿಗೆ ಬೆಲೆ ಕೊಟ್ಟು ತಾವು ತಮ್ಮ ಸ್ಥಾನಕ್ಕೆ ಹೋಗಬೇಕಾಗಿ ವಿನಂತಿ.

(ಗೊಂದಲ)